■ ಹನಿ

## ಬರುವಳೆ ಮಡೋನ್ನಾ

ಮಡೋನ್ನಾಗೆ ವಯಸ್ಸಾದರೂ ಆಕೆಯ ಕಂಠಕ್ಕೆ ಮತ್ತು ಕುಣಿತಕ್ಕೆ ವಯಸ್ಸಾಗುವುದಿಲ್ಲ! 54ರ ಸುಂದರಿ (ಬರ್ತ್‌ಡೇ: 16 ಆಗಸ್ಟ್, 1958) ಮಡೊನ್ನಾ ಇವತ್ತಿಗೂ ಅಮೆರಿಕ ಮತ್ತು ಯೂರೋಪ್ ದೇಶಗಳ 'ನಂಬರ್ ಒನ್' ಗಾಯಕಿ. ಮಾರ್ಚ್‌ನಲ್ಲಿ ಬಿಡುಗಡೆಯಾದ ಆಕೆಯ ಹೊಸ ಆಲ್ಬಂ 'ಎಂಡಿಎನ್‌ಎ' ಕೂಡಾ ಮಾರಾಟದಲ್ಲಿ ಹೊಸ ದಾಖಲೆ ನಿರ್ಮಿಸಿದೆಯಂತೆ. ಇದು ಈಕೆಯ 12ನೆ ಆಲ್ಬಂ. ಎಂಡಿಎನ್‌ಎ ಅಂದರೆ ಮಡೋನ್ನ ಡಿಎನ್‌ಎ ಎಂದು ಅರ್ಥವಂತೆ. 30 ಕೋಟಿ ಮ್ಯೂಸಿಕ್ ಆಲ್ಬಂಗಳನ್ನು ಮಾರಾಟ ಮಾಡಿ ಗಿನ್ನೆಸ್ ದಾಖಲೆ ಸ್ಥಾಪಿಸಿರುವ ಮಡೋನ್ನಾ ಜೂನ್ 3-4 ರಂದು ಅಬುಧಾಬಿಯಲ್ಲಿ ಮೊದಲ ಕಾರ್ಯಕ್ರಮ ನೀಡುತ್ತಿದ್ದಾಳೆ.

ಮಡೋನ್ನಾಳ ಅಬುಧಾಬಿ ಕಾರ್ಯಕ್ರಮಕ್ಕೆ ಈಗಾಗಲೆ ಭರ್ಜರಿ ಪ್ರಚಾರ ಶುರುವಾಗಿದೆ. ಯಾಸ್ ದ್ವೀಪದಲ್ಲಿ ಕಾರ್ಯಕ್ರಮ ನಡೆಯುವ ಪ್ರದೇಶದಲ್ಲಿ ಸಂಪೂರ್ಣ ಮಲ್ಟಿಪಲ್ ಕೂಲಿಂಗ್ ವ್ಯವಸ್ಥೆ ಅಳವಡಿಸಲಾಗಿದೆಯಂತೆ. ಅಬುಧಾಬಿಯಲ್ಲಿ ಭಾರೀ ಸೆಖೆ ಶುರುವಾಗಿರುವ ಹಿನ್ನೆಲೆಯಲ್ಲಿ ಮಿಸ್ಟಿಂಗ್



ಮೆಶಿನ್‌ಗಳನ್ನೂ ಅವಳವಡಿಸಲಾಗುವುದಂತೆ. ಎಲ್ಲ ವರ್ಗದವರೂ ಕಾರ್ಯಕ್ರಮ ನೋಡಲು ಅನುಕೂಲವಾಗುವಂತೆ 4-5 ದರಗಳ ಟಿಕೆಟ್ ಇಡಲಾಗಿದೆ. ಟಿಕೆಟ್ ಬೆಲೆ ಕನಿಷ್ಠ 495 ದಿರ್‍ಹಾಮ್ (ಅಂದಾಜು 7400 ರೂಪಾಯಿ) ನಿಂದ 2295 ದಿರ್‍ಹಾಮ್‌ವರೆಗೂ ಇದೆಯಂತೆ. 50 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಮಡೋನ್ನಾ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರಂತೆ.

ಈ ಮಧ್ಯೆ ಮಡೋನ್ನಾ 'ಭಾರತದಲ್ಲಿ ಕಾರ್ಯಕ್ರಮ ನೀಡುವುದು ಯಾವಾಗ?' ಎನ್ನುವ ವಿಷಯವೂ ಚರ್ಚೆಯಾಗುತ್ತಿದೆ. 2007ರಲ್ಲಿ ಮಡೋನ್ನಾ ಒಮ್ಮೆ ಭಾರತಕ್ಕೆ ಪ್ರವಾಸಿಯಾಗಿ ಬಂದಿದ್ದಳು. ಆಗ ಆಕೆಯ ಗಂಡನಾಗಿದ್ದ ಗೈ ರಿಚೀ ಮತ್ತು ಮಕ್ಕಳು ಜತೆಗಿದ್ದರು. ಜೋಧ್‌ಪುರ, ಉದಯ ಪುರಗಳಲ್ಲಿ ತಂಗಿದ್ದ ಆಕೆ ರಾಜಸ್ಥಾನಿ ಜಾನಪದ ಹಾಡು ಮತ್ತು ಕುಣಿತಗಳನ್ನು ನೋಡಿ ತೀವ್ರ ಪ್ರಭಾವಿತಳಾಗಿದ್ದಳಂತೆ. 'ಭಾರತದಲ್ಲಿ ನನ್ನ ಲಕ್ಷಾಂತರ ಅಭಿಮಾನಿಗಳು ಇದ್ದಾರೆ ಎನ್ನುವುದು ಗೊತ್ತು. ಭಾರತದಲ್ಲಿ ಕಾರ್ಯಕ್ರಮ ನೀಡುವ ಅವಕಾಶ ಇದುವರೆಗೆ ಸಿಕ್ಕಿಲ್ಲ. ಖಂಡಿತಾ ಬರ್ತೀನಿ' ಎಂದು ಕಳೆದ ವಾರ ಮಾಧ್ಯಮಗಳಿಗೆ ಆಕೆ ತಿಳಿಸಿದ್ದಾಳೆ. 'ಎ.ಆರ್.ರೆಹಮಾನ್ ಜತೆಗೆ ಕಾರ್ಯಕ್ರಮ ನೀಡುವ' ಬಗ್ಗೆ ಕೇಳಿದಾಗ, 'ರೆಹಮಾನ್ ಜತೆ ಕೆಲಸ ಮಾಡುವುದು ಇಷ್ಟ. ಆದರೆ ಕಾಲ ಕೂಡಿ ಬರಬೇಕಲ್ಲ? ನೋಡೋಣ' ಎಂದಿದ್ದಾಳೆ.



## ಫೇಸ್‌ಬುಕ್ ಲಾಟರಿ!

ಜಗತ್ತಿನ ಅತ್ಯಂತ ಜನಪ್ರಿಯ ಸಾಮಾಜಿಕ ಜಾಲತಾಣ ಫೇಸ್‌ಬುಕ್ 100 ಶತಕೋಟಿ ಡಾಲರ್ ಸಂಪನ್ಮೂಲ ಸಂಗ್ರಹ ಗುರಿಯೊಂದಿಗೆ ಷೇರುಪೇಟೆ ಪ್ರವೇಶಿಸಿದೆ. ಅದರ ಸಿಇಓ ಮಾರ್ಕ್ ಜುಕರ್‌ಬರ್ಗ್‌ಗೆ ಅತ್ಯಧಿಕ ಲಾಭ ಆಗುವುದಂತೂ ನಿಶ್ಚಿತ. ಈತನ ಒಟ್ಟು ಆಸ್ತಿಯ ಮೌಲ್ಯ 15 ಶತಕೋಟಿ ಪೌಂಡ್‌ಗೆ ಚಿಮ್ಮಿದೆಯಂತೆ! ಅದು ಸಹಜವೇ ಬಿಡಿ; ಆದರೆ ಫೇಸ್‌ಬುಕ್ ಈ ಷೇರು ಸಾಹಸದಿಂದ ನಿಜಕ್ಕೂ ಲಾಟರಿ ಹೊಡೆದಿರುವುದು ಐರಿಶ್ ಗಾಯಕ ರಾಕ್‌ಸ್ಟಾರ್, ಬೋನೋಗೆ. ಆತ ಇದೀಗ 'ವಿಶ್ವದಲ್ಲೇ ಅತ್ಯಂತ ಶ್ರೀಮಂತ ರಾಕ್‌ಸ್ಟಾರ್' ಎಂಬ ಪಟ್ಟಕ್ಕೇರಿದ್ದಾನೆ! 2009ರಲ್ಲಿ ಬೋನೋ ತನ್ನ ಕಂಪೆನಿಯ ಮೂಲಕ ಫೇಸ್‌ಬುಕ್‌ನಲ್ಲಿ 90 ದಶಲಕ್ಷ ಡಾಲರ್ ಹೂಡಿಕೆ ಮಾಡಿದ್ದನಂತೆ. ಫೇಸ್‌ಬುಕ್ ಷೇರುಪೇಟೆ ಪ್ರವೇಶಿಸಿದ್ದರಿಂದ ಅದರ ಮೌಲ್ಯ ಈಗ 1.5 ಶತಕೋಟಿ ಡಾಲರ್‌ಗೆ ಏರಿದೆ!

ಐರ್ಲಂಡ್‌ನ ಈ ಜನಪ್ರಿಯ ಗಾಯಕನ ಮೂಲ ಹೆಸರು ಪೌಲ್ ಡೇವಿಡ್ ಹ್ಯೂಸನ್. (ಬರ್ತ್‌ಡೇ 10-5-1960) ಆದರೆ ಬೋನೋ ಎನ್ನುವ ಜನಪ್ರಿಯ ಹೆಸರಿನಿಂದಾಗಿ ಈತನ ಮೂಲ ಹೆಸರು ಮರೆತೇಹೋಗಿದೆ. ಹಾಡಿನಿಂದ ಗಳಿಸಿದ ಅಪಾರ ದುಡ್ಡನ್ನು ಸಮಾಜಸೇವೆಯಲ್ಲಿ ತೊಡಗಿಸಿರುವುದು ಈತ ಹೆಗ್ಗಳಿಕೆ. ಆಫ್ರಿಕಾದಲ್ಲಿ ಈತ ನಡೆಸುತ್ತಿರುವ ಮಾನವೀಯ ಸೇವೆ ಅಗಾಧವಾದದ್ದು. ಅದಕ್ಕೆಂದೇ ಈತನ ಹೆಸರು ನೋಬೆಲ್ ಶಾಂತಿಪ್ರಶಸ್ತಿಗೆ ನಾಮಕರಣವಾಗಿತ್ತು. ಬ್ರಿಟನ್ನಿನ ರಾಣಿಯಿಂದ ನೈಟ್‌ಹುಡ್ ಪದವಿಯನ್ನೂ ಪಡೆದಿರುವ ಈತ ಅಪಾರ ಶ್ರಮ ಪಟ್ಟು ಕೀರ್ತಿ ಶಿಖರಕ್ಕೇರಿದಾತ. ಈತನ ತಂದೆಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಬಂದ ತಾಯಿ ಅದೇ ದಿನ ಆಘಾತದಿಂದ ಸತ್ತಾಗ ಈತನ ವಯಸ್ಸು ಕೇವಲ 14. ಯು2 ಬ್ಯಾಂಡ್ ಕಟ್ಟಿದಾಗ ಈತನ ವಯಸ್ಸು 16. ಆರಂಭದಲ್ಲಿ ಅಂತಹ ಯಶಸ್ಸು ಸಿಗದಿದ್ದರೂ ಸ್ವಂತ ಕವಿತೆಗಳನ್ನು ಕಟ್ಟಿ ಹಾಡತೊಡಗಿದ ಬಳಿಕ ಯಶಸ್ಸು ಸನಿಹಕ್ಕೆ ಬಂತು. ಈತನ ಅನೇಕ ಹಾಡುಗಳಲ್ಲಿ (ಉದಾಹರಣೆಗೆ ವಿಲ್ ಫಾಲೊ, ಟುಮಾರೋ, ಔಟ್ ಆಫ್ ಕಂಟ್ರೋಲ್ ಮುಂತಾಗಿ) ತಾಯಿಯ ಸಾವಿನ ಶೋಕದ ಛಾಯೆಯಿದೆ. ಫೇಸ್‌ಬುಕ್‌ನ ಷೇರುಪೇಟೆ ಎಂಟ್ರಿಯಿಂದಾಗಿ ನಿಜಕ್ಕೂ ಲಾಟರಿ ಹೊಡೆದಂತಾಗಿರುವ ಈತ ಶ್ರೀಮಂತಿಕೆಯಲ್ಲಿ ವಿಶ್ವದ ರಾಕ್‌ಸ್ಟಾರ್‌ಗಳಲ್ಲೇ ಮುಂಚೂಣಿಯಲ್ಲಿರುವ ಪೌಲ್ ಮೆಕರ್ಟ್ನಿಯನ್ನೂ (ಆಸ್ತಿ: ಒಂದು ಶತಕೋಟಿ ಡಾಲರ್) ಹಿಂದಿಕ್ಕಿದ್ದಾನೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65